ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ..ದಂ.ರವರ ನ್ಯಾಯಾಲಯ,
ಟಿ. ನರಸೀಪುರ.

## ಸಿ.ಸಿ ನಂ. **378/2018**

ಪಿರ್ಯಾದಿದಾರರು : ಸರ್ಕಾರ ಪರವಾಗಿ ಬನ್ನೂರು ಪೊಲೀಸ್ ಠಾಣೆ

ವಿರುದ್ದ

ಆರೋಪಿಗಳುಃ : ಮಲ್ಲೇಶ

## ದೋಷಾರೋಪಣೆ

ಶ್ರೀ ಪ್ರಶಾಂತ ಜಿ. ಸಿ., ಬಿ.ಎ.ಎಲ್., ಎಲ್.ಎಲ್.ಎಂ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯಾದ ನಾನು ಆರೋಪಿಗಳಾದ

1. ಮಲ್ಲೇಶ ಬಿನ್ ಲೇಟ್ ಮಹದೇವಯ್ಯ,
   ವಯಸ್ಸುಃ20 ವರ್ಷ, ಉದ್ಯೋಗಃ ಕಾರ್ಮಿಕ,
   ವಾಸಃ ಚಿಕ್ಕಬು ಹಳ್ಳಿ , ಟಿ. ನರಸೀಪುರ ತಾಲ್ಲೂಕು,
   ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ

ದಿಃ 02.06.2017 ರಂದು 1 ನೇ ಆರೋಪಿ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಕಿರಣ್ ರಾತ್ರಿ ವೇಳೆಯಲ್ಲಿ ಸೋಸಲೆ ಗ್ರಾಮ ಪಂಚಾಯತಿಯ ಕಾರ್ಯಾಲಯದ ಬಾಗಿಲಿಗೆ ಹಾಕಿದ ಬೀಗವನ್ನು ಕಬ್ಬಿಣದ ರಾಡಿನಿಂದ ಮೀಟಿ ಒಳಗೆ ಹೋಗಿ ಅತಿಕ್ರಮವಾಗಿ ಪ್ರವೇಶಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 457 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಕಿರಣ್ ಒಟ್ಟು 15 ಸಾವಿರ ಬೆಲೆ ಬಾಳುವ ಒಂದು ಎಸರ್ ಕಂಪನಿಯ ಸಿ.ಪಿ.ಯು ಹಾಗೂ 2 ಎಸರ್ ಕಂಪನಿಯ ಮಾನಿಟರ್ ಕಳ್ಳತನ ಮಾಡಿ ಆ ಮೂಲಕ ಭಾರತಿಯ ದಂಡ ಸಂಹಿತೆಯ ಕಲಂ 380 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಮೇಲಿನ ಆರೋಪದ ವಿಚಾರಣೆಯು ನಿಮ್ಮ ವಿರುದ್ಧ ಈ ನ್ಯಾಯಾಲಯದಲ್ಲಿ ನಡೆಯತಕ್ಕದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ **07.12.2019**

**(ಪ್ರಶಾಂತ ಜಿ ಸಿ.)**

**ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.**
**ಟಿ. ನರಸೀಪುರ.**